ಆಕೆಯ ಅಜ್ಜ ದೂಮಣ್ಣ ಪರಾರಿಯವರಿಗೆ ತುಂಬು ಸಂತೋಷ ಹಾಗೂ ಸಮಾಧಾನವನ್ನು ತಂದಿತ್ತು.

ತಿಂಗಳಿಗೊಮ್ಮೆ, ತನ್ನ ತೋಟದಲ್ಲಿರುವ ಹೂಹಕ್ಕಿಗಳಷ್ಟೇ ಚುರುಕಾಗಿ ತನ್ನ ತೋಟದಲ್ಲಿ ಮಕ್ಕಳೊಂದಿಗೆ ಓಡಾಡುವ ಮನೋರೋಗತಜ್ಞೆ ಸ್ವಪ್ನ ಹೆಗ್ಡೆಯ ಓಡಾಟವೇ ಡಾ. ವಾಹೀದ್ ಅವರಿಗೆ 'ಬಾಲವನ'ವನ್ನು ಮತ್ತಷ್ಟು ವಿಸ್ತರಿಸುವ ಆತ್ಮಬಲ ಮತ್ತು ಚೈತನ್ಯವನ್ನು ತಂದುಕೊಟ್ಟಿತ್ತು...

ಇದೀಗ ಅಕ್ಷಯಕುಮಾರನ ಮಡದಿ ಕುಮುದಳ ಅರೆಬಿರಿದ ತುಟಿಯ ನಗುವಿನಲೆಯಲ್ಲಿ ಒಂದು ಕ್ಷಣ, ತನ್ನಿಷ್ಟದ ಡಾ. ಸ್ವಪ್ನ ಹೆಗ್ಡೆಯನ್ನು ಕಂಡ ಡಾ. ವಾಹೀದ್ ಅವರು, ತನ್ನ ಧ್ಯಾನವನ್ನು ಮತ್ತೆ ಅಕ್ಷಯಕುಮಾರನತ್ತ ನೆಟ್ಟು ಇನ್ನೇನೋ ಹೇಳಬೇಕೆನ್ನುವಷ್ಟರಲ್ಲಿ ಅಕ್ಷಯಕುಮಾರ ಅತೀವ ವಿನೀತನಾಗಿ—

'ಇಲ್ಲ ಸರ್ ಅವ್ನು..., ಅವ್ನು... ಅವ್ನು... ಕೌಶಿಕ ಅಷ್ಟು **fast** ಆಗಿ ಓಡಿದ್ರೆ...'

'ಏನ್ರೀ... ಅವ್ನು ಅವ್ನು?!... ಅವ್ನು ಹಾಗೇ **fast** ಆಗಿ ಓಡಿ ಓಡಿ... ಎಲ್ಲಿ ಆ ಹಾಡು ಹೇಳೋ ಬುದ್ಧಿಮಾಂದ್ಯ ಮಕ್ಳ ಗುಂಪಿನ ಜತೆ ಸೇರ್ತಾನೋ?... ಎಲ್ಲಿ ಇವ್ನೂ ಅವ್ರ ಹಾಗೆ ಆಗಿ ಬಿಡ್ತಾನೋ ಅನ್ನುವ ಭಯ ಅಲ್ವೇನ್ರಿ ನಿಮ್ಗೆ?! ನಿಮ್ಮನ್ನ ನಾನು ಆಗದಿಂದ್ಲೂ ಗಮನಿಸ್ತಾ ಇದ್ದೇನೆ. ಆ 'ವಿಶೇಷ' ಮಕ್ಳನ್ನ ನೀವು ಭಯ, ಕುತೂಹಲ ಆತಂಕದಿಂದ ದಿಟ್ಟಿಸುತ್ತಾ ಇರೋದನ್ನು... ಛೇ... ಛೇ...'

ತನ್ನ ಮುಖದ ಹಸಿ ಹಸಿ ಭಾವನೆಗಳನ್ನೆಲ್ಲ, ಬಾಳೆದಿಂಡಿನ ಪದರ ಸುಲಿದಷ್ಟು ಸಲೀಸಾಗಿ ಸುಲಿದಿಡುತ್ತಿರುವ ಡಾ. ವಾಹೀದ್ ಸಾಹೇಬರಿಂದ ತಪ್ಪಿಸಿಕೊಳ್ಳುವುದು ಹೇಗಪ್ಪ ಎಂದು ಅಕ್ಷಯಕುಮಾರ ಒದ್ದಾಡುತ್ತಲೇ... ವೈದ್ಯರು ಮತ್ತೆ ತಮ್ಮ ಮಾತನ್ನು ಮುಂದುವರಿಸದಂತೆ, ಒಂದು ಗುಟುಕು ಉಗುಳು ನುಂಗುತ್ತಾ ಅಂದ:

'ಹಾಗಲ್ಲ ಸರ್, ನಮ್ಮ ಕೌಶಿಗೆ ಹಾಗೆ ಓಡಿ ಅಭ್ಯಾಸವಿಲ್ಲ, ನಾವಿರೋದು ಅಪಾರ್ಟ್‌ಮೆಂಟಿನ ಎರಡನೇ ಮಹಡಿಯಲ್ಲಿ; ಅವ್ನ ಶಾಲೆಯಲ್ಲೂ ಓಟಕ್ಕೆ ಅಲ್ಲಿ ಆಟದ ಮೈದಾನವಿಲ್ಲ... ನಮ್ಮ ಬಾಲ್ಯದಲ್ಲಿ ಇದ್ದ ಹಾಗೆ... ಕೆರೆದಡ, ಟೊಪ್ಪಿಯಾಟ, ಹುಲಿದನ, ಕುಂಟೇಬಿಲ್ಲೆ, ಲಗೋರಿ ಆಟ ಇಂತದ್ದು ಇಲ್ವೇ ಇಲ್ಲ ಅಲ್ಲಿನ ಶಾಲೆಗಳಲ್ಲಿ... ಅವ್ನಿಗೆ ಓಡಿ ಅಭ್ಯಾಸ ಇಲ್ವಲ್ಲ ಸರ್... ಅದಕ್ಕೆ ಹಾಗಂದೆ...'

'ನೋಡಿ ಮಿಸ್ಟರ್ ಅಕ್ಷಯಕುಮಾರ್, ನಾನು ನಿಮ್ಮ ಮುಖ ಮಾತ್ರ ನೋಡ್ತಾ ಇಲ್ಲ... ನಿಮ್ಮ ಅಂತರಂಗ ಹಾಗೂ ಅದರೊಳಗಿಂದ ನುಸುಳಿ ಬರುವ ಒಂದೊಂದು ಮಾತನ್ನೂ ಓದ್ತಾ ಇದ್ದೀನಿ... ಕೌಶಿಕನ ಸಮಸ್ಯೆಗೆ ನನಗೆ ಸುಲಭವಾಗಿ ಉತ್ತರ ಸಿಗ್ತಾ ಇದೆ...'

ವೈದ್ಯರ ಮಾತು ಇನ್ನೂ ಮುಗಿದಿಲ್ಲ... ಅಷ್ಟರಲ್ಲೇ ಕೌಶಿಕ ಆಸ್ಪತ್ರೆಯ ಆವರಣದ ಮರದಡಿಯಿಂದ ಮತ್ತಗೆ ಓಡಿ ಬಂದವನೇ. '...ಅಮ್ಮಾ... ಒಮ್ಮೆ ಆ ಬಣ್ಣದ ಪೆನ್ಸಿಲ್ ಕೊಡಮ್ಮ..., ಮತ್ತೆ ನನ್ನ ಗಣಿತದ ಪುಸ್ತಕನೂ...'

'ಯಾಕೋ ಮಾರಾಯ... ಗಣಿತದ ಪುಸ್ತಕ?!' ಎಂದು ಡಾ. ವಾಹೀದ್ ಅವರು ಕೇಳಿದರೆ –

'ಚಿತ್ರ ಬರಿಲಿಕ್ಕೆ' ಎಂಬ ನಿರಾಳ ಉತ್ತರ.

'ಗಣಿತದ ಪುಸ್ತಕವೇ ಯಾಕೆ ಬೇಕಪ್ಪ? ಬೇರೆ ಮೋರಲ್ ಸಯನ್ಸಿದ್ದು ಆಗಲ್ವಾ?...'

'ಅದ್ರಲ್ಲಿ ಚಿತ್ರ ಬರೆದೂ ಬರೆದು... ಅದನ್ನು ಆಗಲೇ ಮುಗಿಸಿದೀನಿ. ನನ್ನ ಗಣಿತ ಪುಸ್ತಕದಲ್ಲಿ ಇನ್ನೂ ತುಂಬಾ ಖಾಲಿ ಪುಟ ಇದೆಯಲ್ವ...'